**ಮಿತಿಮೀರಿದ ಜನದಟ್ಟಣೆಯಿಂದ, ಮಾಲಿನ್ಯದ ಪರಾಕಾಷ್ಠೆಯಿಂದ, ರಾಜಕೀಯ ಶಕ್ತಿಕೇಂದ್ರಗಳ ಕಾರಣಗಳಿಂದ ನಮಗೆ ರಾಜಧಾನಿ ದೆಹಲಿ ಗೊತ್ತು. ಆದರೆ ಇವಿಷ್ಟೇ ದೆಹಲಿಯ ಗುರುತುಗಳೇ? ಇಂಥ ಜನಪ್ರಿಯ ಗುರುತುಗಳಾಚೆ ದೆಹಲಿಯ ಅನನ್ಯ ಚಹರೆಗಳನ್ನು ಕಾಣುವ ಪ್ರಯತ್ನ ಈ ಬರಹದಲ್ಲಿದೆ. ಮೇಲ್ನೋಟಕ್ಕೆ ವೀಕ್ಷಣೆಯ ವಿವರಣೆಯಂತೆ ಭಾಸವಾಗುವ ಈ ಬರಹಕ್ಕೆ, ಮಾಮೂಲಿ ವಿವರಗಳ ಮೂಲಕವೇ ಘನವಾದ ಮಾನವೀಯ ಕಥನವನ್ನು ಕಟ್ಟುವ ಬಹುಸೂಕ್ಷ್ಮ ನೇಯ್ಗೆಯೂ ಇದೆ. ಅಕ್ಷರಗಳ ಜೊತೆಗೆ ನಿಂತು ಅನೂಹ್ಯಕ್ಕೆ ಕೈಚಾಚುವ ಚಿತ್ರಗಳು, ಆಡದೇ ಉಳಿದಿರುವ ಮಾತುಗಳನ್ನೂ ಓದುಗರ ಮನಸ್ಸಿಗೆ ದಾಟಿಸುವಷ್ಟು ಶಕ್ತವಾಗಿವೆ.**

‘ನೀನೆಲ್ಲಿ ಈಗ ಹೆಗಲಿಗೆ ಹೆಗಲ ಕೊಟ್ಟವನು
ಹಾಯಿಯನ್ನುರುಟುರುಟು ಊದಿದವನು,
ದಾರಿಯುದ್ದಕ್ಕು ರಹದಾರಿ ಗಿಟ್ಟಿಸಿ ದಿಳ್ಳಿ
ದ್ವೀಪಾಂತರಕ್ಕೆ ಕೈ ಕೊಟ್ಟ ಸಖನು?’
—ಗೋಪಾಲಕೃಷ್ಣ ಅಡಿಗ (ಕೂಪ ಮಂಡೂಕ)

ಬಹಳ ದಿನಗಳಿಂದ ನೋಡಬೇಕೆಂದುಕೊಂಡಿದ್ದ ದಿಲ್ಲಿಗೆ ಹೋದಾಗ ಏಪ್ರಿಲ್ ತಿಂಗಳ ಬಿಸಿಲು. ಎಲ್ಲೆಲ್ಲೂ ಧಗೆ. ನಾನು ಮುಂಚೆಯೇ ಬುಕ್ ಮಾಡಿದ್ದ ಏರ್ ಬಿಎನ್‌ಬಿ ಅಪಾರ್ಟ್‌ಮೆಂಟ್ ತಲುಪಿದಾಗ ‘ಪ್ರತೀಕ್..! **come all the way up**’ ಎಂದು ಮೇಲಿಂದ ಮಂದೀಪ್ ಕೂಗಿದ. ಲಿಫ್ಟ್ ಇಲ್ಲದ ನಾಲ್ಕನೆಯ ಮಹಡಿಯಲ್ಲಿದ್ದ ಟೆರೇಸ್ ಅಪಾರ್ಟ್‌ಮೆಂಟಿನ ರೂಮೊಂದರಲ್ಲಿ ನನ್ನ ಒಂದು ವಾರದ ವಾಸ್ತವ್ಯ ಏರ್ಪಾಡಾಗಿತ್ತು.

ಮನೆಯ ಪರಿಚಯವನ್ನು ಮಂದೀಪ್ ಚುಟುಕಾಗಿ ಮಾಡಿಸಿ ಅಗತ್ಯವಿದ್ದಲ್ಲಿ ತನ್ನನ್ನು ಸಂಪರ್ಕಿಸಬಹುದೆಂದು ಹೇಳಿದ. ಪ್ರಯಾಣದ ದಣಿವಾರಿಸಿಕೊಂಡ ನಂತರ ರಜೆಯಲ್ಲಿದ್ದರೂ ಪ್ರಾಜೆಕ್ಟಿನ ಸಣ್ಣ ಕೆಲಸವೊಂದನ್ನು ಕೂಡಲೇ ಮಾಡಿ ಮುಗಿಸಬೇಕಾಯಿತು. ಲ್ಯಾಪ್‌ಟಾಪ್‌ನಿಂದ ವೈಫೈಗೆ ಕನೆಕ್ಟ್ ಆಗಲು ಬೇಕಾದ ಪಾಸ್‌ವರ್ಡ್ ಪಕ್ಕದ ರೂಮಿನಲ್ಲೇ ಇದ್ದ ಮಂದೀಪ್ ಬಳಿ ಕೇಳಿದೆ. ‘ರೈಖಿ4561’ ಎಂಬ ಪಾಸ್‌ವರ್ಡ್ ಕೇಳಿದಾಗ ಎಲ್ಲೋ ಕೇಳಿದ್ದ ಬಿಡಿ ವ್ಯಕ್ತಿತ್ವವೊಂದು ಅಕಸ್ಮಾತ್ತಾಗಿ ಹೊಳೆಯಿತು. ‘ಮಂದೀಪ್ ರೈಖಿ’ ಎಂಬ ಹೆಸರನ್ನು ಕೆಲವರ್ಷಗಳ ಹಿಂದೆ ಕೇಳಿದ್ದೆ. ನನ್ನ ಗೆಳತಿಯೊಬ್ಬಳು ಅವನ ಬಗ್ಗೆ ಮತ್ತು ಮೂಕವಿಸ್ಮಿತಗೊಳಿಸಿದ್ದ ಅವನ ನೃತ್ಯದ ಬಗ್ಗೆ ಹೇಳಿದ್ದಳು. ಅವನು ನೃತ್ಯಸಂಯೋಜಿಸಿದ್ದ ‘ಕ್ವೀನ್ ಸೈಜ್’ ಎಂಬ ಪ್ರದರ್ಶನದ ಬಗ್ಗೆಯೂ ಹೇಳಿದ್ದಳು. ಇನ್ನು ಇವನೇ ಅವನಾ ಎಂದು ಕೇಳಿ ಖಚಿತ ಪಡಿಸಿಕೊಳ್ಳುವುದೊಂದೇ ಉಳಿದಿತ್ತು.

ಸೌತ್ ಡೆಲ್ಲಿಯ ವಸಂತ್ ಕುಂಜ್ ಎಂಬ ಪ್ರಶಾಂತವಾದ, ಬಹಳಷ್ಟು ಹಸಿರಾಗಿದ್ದ ಪರಿಸರದಲ್ಲಿ ಮಂದೀಪ್ ಮನೆಯಿತ್ತು. ಮನೆಯ ಸುತ್ತಲೂ ವಿಶಾಲವಾಗಿದ್ದೂ, ಒತ್ತೊತ್ತಾಗಿರುವಂತೆ ಕಂಡ ಮಾಸಲು ಹಳದಿ ಬಣ್ಣದ ಅಪಾರ್ಟ್‌ಮೆಂಟ್ ಸಾಲುಗಳಿದ್ದವು. ಮನೆಯ ಮುಖ್ಯದ್ವಾರದಿಂದ ಒಳಬರುತ್ತಿದ್ದಂತೆಯೇ ಹಾಲಿನ ಒಂದು ಬದಿಯಲ್ಲಿ ತಂತಿಗಳಿಲ್ಲದ ಹಳೆಯ ಸಿತಾರ್ ಕಂಡಿತು. ಕೇಳಿದಾಗ ಅಮ್ಮ ಒಂದು ಕಾಲದಲ್ಲಿ ಕಲಿಯುತ್ತಿದ್ದು, ಈಗ ಕೇವಲ ಶೋ ಪೀಸಾಗಿ ಉಳಿದಿರುವುದಾಗಿ ಹೇಳಿದ.

ಹಾಲಿನ ಇನ್ನೊಂದು ಬದಿಯಲ್ಲಿದ್ದ ಬಾಗಿಲು ತೆರೆದಿದ್ದು, ಒಳಮಹಡಿಯೊಂದು ಕಾಣುತ್ತಿತ್ತು. ಮೆಟ್ಟಿಲುಗಳಿಳಿಯುತ್ತಿದ್ದಂತೆ ಗೋಡೆಯ ಮೇಲೆ ಸಾಲಾಗಿ ಹಳೆಯ ಫೋಟೊಗಳು ಕಂಡವು. ಲಂಡನ್ ಕ್ಲಾಕ್ ಟವರ್ ಎದುರು ನಿಂತ ಅಪ್ಪ ಮಗನಂತೆ ಕಂಡ ಇಬ್ಬರು, ಪುಸ್ತಕವನ್ನು ಓದುತ್ತ ಮೈಮರೆತ ಎಳೆಯ ಹುಡುಗ ಮತ್ತು ಯಾವುದೋ ಪಾರ್ಟಿಯ ಹುಡುಗ ಹುಡುಗಿಯರ ಗುಂಪು. ಒಳಮಹಡಿ ಇಳಿದು ನನ್ನ ರೂಮಿನ ಒಳಹೊಕ್ಕ ಕೂಡಲೇ ಕಂಡಿದ್ದು ದೊಡ್ಡ ವರ್ತುಲಾಕಾರದ ಕಿಟಕಿಯಿಂದ ಧಾರಾಳವಾಗಿ ಬರುತ್ತಿದ್ದ ಪ್ರಖರ ಬೆಳಕು ಹಾಗೂ ಕಿಟಕಿಯ ನೇರ ಎದುರಿಗಿದ್ದ ಕ್ವೀನ್ ಸೈಜ್ ಬೆಡ್. ದಿಲ್ಲಿಯಲ್ಲಿ ನೋಡಬೇಕೆಂದುಕೊಂಡ ಸ್ಥಳಗಳ ಪಟ್ಟಿ ತಿಂಗಳ ಹಿಂದೆಯೇ ಮಾಡಿಕೊಂಡಿದ್ದರೂ ಮಂದೀಪನ್ನು ‘ಮಸ್ಟ್ ಸೀ’ ಜಾಗಗಳನ್ನು ತಿಳಿಸಲು ಹೇಳಿದೆ.

ಮನೆಯ ಎದುರಿನ ಅಂಗಳದಲ್ಲಿದ್ದ ಕಪ್ಪು ಬಿಳುಪಿನ ಬೆಕ್ಕು ತುಸು ಅನುಮಾನದಿಂದ ನನ್ನನ್ನು ನೋಡುತ್ತಿತ್ತು.

ಎರಡನೆಯ ದಿನ ಬಿಸಿಲೇರುವ ಮುನ್ನ ವಸಂತ್ ಕುಂಜನ್ನು ಒಂದು ಸುತ್ತು ಹೊಡೆದು ಬರಲು ಹೊರಟೆ. ಕೆಲವೇ ನಿಮಿಷಗಳಲ್ಲಿ ನೋಡಬೇಕಾದ ಜಾಗಗಳ ಪಟ್ಟಿ ಇರುವ ಅಚ್ಚುಕಟ್ಟಾದ ವಾಟ್ಸ್‌ಆ್ಯಪ್ ಮೆಸೇಜೊಂದು ಬಂದಿತ್ತು. ನಿಜಾಮುದ್ದೀನ್ ದರ್ಗಾ, ಜಾಮಾ ಮಸ್ಜಿದ್, ಹುಮಾಯುನ್ ಕಾ ಮಕ್ಬರಾ ಹಾಗೂ ಮೆಹ್ರೋಲಿ ಪಾರ್ಕ್ ಅದರಲ್ಲಿ ಪ್ರಮುಖವಾಗಿದ್ದವು. ಇನ್ನಷ್ಟು ವಿಚಾರಿಸಬೇಕೆಂದು ಮನೆಗೆ ಬಂದಾಗ ಮಂದೀಪ್ ಒಂದು ಕಪ್ ಚಹಾ ಹಿಡಿದು ಅಂಗಳದಲ್ಲಿದ್ದ ಪಾಟಿನಲ್ಲಿ ಚಿಗುರಿದ್ದ ಟೊಮ್ಯಾಟೋ ಗಿಡ ನೋಡುತ್ತಾ ಕುಳಿತಿದ್ದ. ಪಕ್ಕದಲ್ಲಿ ಮತ್ತೊಂದು ಕಪ್ಪಿನಲ್ಲಿದ್ದ ಚಹಾ ಕಂಡಿತು. ಒಳಗಿನಿಂದ ಯಾರದೋ ಮಾತಿನ ಸದ್ದು.

ಕಾಫಿ ಮಾಡಲಿಕ್ಕೆಂದು ಒಳಗೆ ಬಂದಾಗ ಎತ್ತರದ ನಿಲುವಿನ, ಸುಮಾರು ಮೂವತ್ತರ ಆಸುಪಾಸಿನ ಹುಡುಗನೊಬ್ಬ ಮಂದೀಪನ ಬೆಡ್‌ರೂಮಿನಿಂದ ಹೊರಬಂದ. ಫೋನಿನಲ್ಲಿ ಮಾತನಾಡುತ್ತಾ ಬೆಡ್‌ರೂಮಿನ ಒಳಗೆ ಹೊರಗೆ ಆತಂಕದಿಂದ ನಡೆದಾಡುತ್ತಿದ್ದ. ಕಾಫಿ ಮಾಡಿ ಮಗ್ಗನ್ನು ಮೈಕ್ರೊವೇವಿನಲ್ಲಿಟ್ಟು ಬಿಸಿಯಾಗಲು ಕಾಯುತ್ತಿದ್ದಾಗ ಮಂದೀಪ್ ಒಳಗೆ ಬಂದು ಪಾಟಿನಲ್ಲಿದ್ದ ಆಲೊವೆರಾ ಗಿಡಕ್ಕೆ ನೀರು ಹಾಕಿದ. **‘How long will you live like this ma?’** ಎಂಬ ಪ್ರಶ್ನೆಯೊಂದಿಗೆ ಮಾತನ್ನು ಅರೆಮನಸ್ಸಿನಿಂದ ಮುಗಿಸಿ ಹಾಲಿನಲ್ಲಿದ್ದ ಚಾರ್ಪಾಯ್ ಮೇಲೇ ಕುಸಿದು ರಾಹುಲ್ ಆಯಾಸದ ನಗುವನ್ನು



ಜಂತರ್ ಮಂತರ್